REGISTERED WITH RNI NEW DELHI REG. N0.69683/97-Postal Registration No.RNP/KA/BGS/2259/2024-2026
Office of Posting: Bangalore PSO, Bangalore - 560026.; Date of Posting & Publishing Every Wednesday; Price Rs. 2 (Pages-8)

ಪಟ್ಟಣ ಸಹಕಾರ ಬ್ಯಾಂಕುಗಳ
# ವಾರ್ತಾ ಪತ್ರಿಕೆ

ಕರ್ನಾಟಕ ರಾಜ್ಯ ಸಹಕಾರ ಪಟ್ಟಣ ಬ್ಯಾಂಕುಗಳ ಮಹಾಮಂಡಳದ ಅಧಿಕೃತ ಕನ್ನಡ ವಾರಪತ್ರಿಕೆ

ಸಂಪುಟ : 32 । ಸಂಚಿಕೆ : 34 । 26 ನವೆಂಬರ್ 2025 । ಬುಧವಾರ । ಪುಟಗಳು : 8 । ಬೆಲೆ : 2/-

## ಹಾವೇರಿಯಲ್ಲಿ ಸಚಿವ ಎಚ್.ಕೆ. ಪಾಟೀಲರಿಂದ
## 72ನೇ ಅಖಿಲ ಭಾರತ ಸಹಕಾರ ಸಪ್ತಾಹ-2025 ಉದ್ಘಾಟನೆ




**ಹಾವೇರಿ :** ದೇಶದ ಅಭಿವೃದ್ಧಿಗೆ ಸಹಕಾರ ಕ್ಷೇತ್ರದ ಚಳವಳಿ ಸೂಕ್ತ ವಾಹಕವಾಗಿದೆ. ಸರಕಾರಕ್ಕಿಂತಲೂ ಸಹಕಾರ ಚಳವಳಿ ಇಂದು ಬಹಳಷ್ಟು ಪ್ರಬಲವಾಗಿ ಬೆಳೆಯುತ್ತಿದೆ. ಬರುವ ದಿನಗಳಲ್ಲಿ ಸಹಕಾರ ಕ್ಷೇತ್ರಕ್ಕೆ ಮತ್ತಷ್ಟು ಬಲ ಬರಲಿದೆ ಎಂದು ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಹಾಗೂ ಪ್ರವಾಸೋದ್ಯಮ ಸಚಿವರು ಹಾಗೂ ಮಹಾಮಂಡಳದ ಅಧ್ಯಕ್ಷರಾದ ಶ್ರೀ ಎಚ್.ಕೆ.ಪಾಟೀಲರು ಹೇಳಿದರು. ನಗರದ ರಜನಿ ಸಭಾಂಗಣದಲ್ಲಿ ದಿನಾಂಕ : 18.11.2025ರ ಮಂಗಳವಾರ ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ, ಕರ್ನಾಟಕ ರಾಜ್ಯ ಸಹಕಾರ ಪಟ್ಟಣ ಬ್ಯಾಂಕುಗಳ ಮಹಾಮಂಡಳ, ಕರ್ನಾಟಕ ರಾಜ್ಯ ಸಹಕಾರ ಗ್ರಾಹಕರ ಮಹಾಮಂಡಳ, ಕರ್ನಾಟಕ ರಾಜ್ಯ ಪತ್ತಿನ



ಸಹಕಾರ ಸಂಘಗಳ ಮಹಾಮಂಡಳ, ಕರ್ನಾಟಕ ರಾಜ್ಯ ಸಹಕಾರ ಉಣ್ಣೆ ಕೈಮಗ್ಗ ನೇಕಾರರ ಮಹಾಮಂಡಳ, ಕರ್ನಾಟಕ ರಾಜ್ಯ ಸಹಕಾರ ಮಹಿಳಾ ಮಹಾಮಂಡಳ ನೇತೃತ್ವದಲ್ಲಿ ಹಮ್ಮಿಕೊಂಡಿದ್ದ 72ನೇ ಅಖಿಲ ಭಾರತ ಸಹಕಾರ ಸಪ್ತಾಹ – 2025 ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಆತ್ಮನಿರ್ಭರ ಭಾರತ ಸಾಧನೆಗೆ ವಾಹಕಗಳಾಗಿ ಸಹಕಾರ ಸಂಸ್ಥೆಗಳು ಎಂಬುದು ಈ ವರ್ಷದ ಧ್ಯೇಯವಾಗಿದೆ. ದೇಶವನ್ನು ಸ್ವಾವಲಂಬಿಯಾಗಿ ಮಾಡಬೇಕಾದರೆ ಸಹಕಾರಿ ಸಂಸ್ಥೆ, ಸಹಕಾರಿ ಚಳವಳಿ ಎನ್ನುವ ಅರಿವು ಎಲ್ಲರಲ್ಲೂ ಮೂಡಿರುವುದು ಸಂತೋಷದ ಸಂಗತಿ. ರಾಷ್ಟ್ರದ ಅಭಿವೃದ್ಧಿಗೆ ಸಹಕಾರ ಕ್ಷೇತ್ರ ಪ್ರಬಲ ಅಸ್ತ್ರವಾಗಿ ಬೆಳೆಯುತ್ತಿದೆ. ಸಹಕಾರ ಕ್ಷೇತ್ರ ಆರಂಭದಲ್ಲಿ ಮುಂಬೈ ಪ್ರಾಂತದ ತುಂಬೆಲ್ಲಾ ವ್ಯಾಪಿಸಿ ಮಹಾರಾಷ್ಟ್ರ, ಗುಜರಾತ, ಕರ್ನಾಟಕದಲ್ಲಿ ಹೆಚ್ಚು ಬೆಳವಣಿಗೆ ಕಂಡಿತು. ಸಹಕಾರ ಕ್ಷೇತ್ರದಲ್ಲಿ ಶೇ.80ರಷ್ಟು ಸಹಕಾರಿ, ಜವಳಿ, ಆಹಾರ ಸಂಸ್ಕರಣ ಕಟ್ಟಡಗಳು ಸ್ಥಾಪನೆಯಾಗಿವೆ. ಜನರ ಬದುಕಿನಲ್ಲಿ ಗುಣಾತ್ಮಕ ಬದಲಾವಣೆಯಾಗಿದ್ದರೆ ಅದು ಸಹಕಾರಿ ಕ್ಷೇತ್ರದಿಂದ ಮಾತ್ರವೇ ಸಾಧ್ಯ" ಎಂದರು.

"ಸಹಕಾರಿ ಸಂಸ್ಥೆಗಳು ರಾಷ್ಟ್ರದಲ್ಲಿ ಪ್ರಜಾಪ್ರಭುತ್ವದ ಶಾಲೆಗಳಾಗಿವೆ. ಸಹಕಾರಿ ರಂಗ ಜನರಲ್ಲಿ ಆತ್ಮವಿಶ್ವಾಸ, ಆತ್ಮಸ್ಥೈರ್ಯ ತುಂಬಿದೆ. ಹಾಲು ಸಂಗ್ರಹಣೆಯಲ್ಲಿ ಕೋಟ್ಯಂತರ ರೂ. ಸಂಗ್ರಹವಾಗುತ್ತದೆ. ಜನಸಾಮಾನ್ಯರ ಕುಟುಂಬದ ಆದಾಯ ಹಂತಹಂತವಾಗಿ ದ್ವಿಗುಣವಾಗಿ, ಬದುಕಿನಲ್ಲಿ ಬದಲಾವಣೆಯಾಗಿದೆ" ಎಂದರು. ಸಹಕಾರಿ ಕ್ಷೇತ್ರದಲ್ಲಿ ಸಮಾಲೋಚನೆ, ಪ್ರೇರಕರಾಗಿ ನಿರ್ಣಯ ಕೈಗೊಳ್ಳಲು ಅನುಕೂಲ ಆಗುತ್ತದೆ. ಸಹಕಾರಿ ಕ್ಷೇತ್ರದಲ್ಲಿ ನೈಜ ಪ್ರಜಾಪ್ರಭುತ್ವ ವ್ಯವಸ್ಥೆ ಇದೆ. ರೈತರು, ಬಡವರು, ಮಹಿಳೆಯರ ಪರವಾಗಿ ಸಹಕಾರಿ ಸಂಸ್ಥೆಗಳು ಸೇವೆ

....3ನೇ ಪುಟಕ್ಕೆ

ವಿಶ್ವಕರ್ಮ ಬ್ಯಾಂಕಿನಿಂದ ಸಮಾಜಮುಖಿ ಕಾರ್ಯ – ಡಾ. ದೇವದಾಸ್ ರೈ 5

ಎಂಸಿಸಿ ಬ್ಯಾಂಕಿನಲ್ಲಿ ಅರ್ಧ ವಾರ್ಷಿಕ ಕಾರ್ಯಕ್ಷಮತೆ ವಿಮರ್ಶೆ ಮತ್ತು ಸೈಬರ್ ಭದ್ರತಾ ಜಾಗೃತಿ ಕಾರ್ಯಕ್ರಮ 6

ನಿಮ್ಮ ಪ್ರಶ್ನೆಗೆ ನಮ್ಮ ಉತ್ತರ 7

## ಸಂಪಾದಕೀಯ

## ಆತ್ಮೀಯ ಸಹಕಾರಿಗಳೇ...



**ಒಂದೇ ಒಂದೇ ನಾವೆಲ್ಲರೂ ಒಂದೇ**
**ಈ ದೇಶದಲೊಳು ಎಲ್ಲಿದ್ದರು ಭಾರತ ನಮಗೊಂದೇ ॥**

ನಮ್ಮ ದೇಶ ಹಲವು ವೈವಿಧ್ಯಗಳ ಸಂಗಮವಾಗಿದ್ದು, ಅದು ವಿವಿಧ ರಾಜ್ಯ, ವಿಂಗಡಿಸಲ್ಪಟ್ಟಿದೆ. ಒಂದೊಂದು ರಾಜ್ಯಗಳಲ್ಲೂ ಬೇರೆ ಬೇರೆ ಭಾಷೆಗಳನ್ನಾಡುವ, ವೇಷ ಭೂಷಣಗಳ ತೊಡುವ, ಆಹಾರ ಕ್ರಮ ಅನುಸರಿಸುವ, ದೈವಗಳ ಪೂಜಿಸುವ ಜನಾಂಗಗಳಿವೆ. ಅದೆಲ್ಲವನ್ನು ಒಗ್ಗೂಡಿಸಿರುವುದೇ ನಮ್ಮ ಸಂವಿಧಾನ.

ಸಂವಿಧಾನದಲ್ಲಿ ಕಾರ್ಯಾಂಗ, ಶಾಸಕಾಂಗ ಮತ್ತು ನ್ಯಾಯಾಂಗಗಳನ್ನು ಮೂರು ಮುಖ್ಯ ಅಂಗಗಳಾಗಿ ವಿಭಾಗಿಸಲಾಗಿದ್ದು, ಅವುಗಳ ಅಧಿಕಾರದ ವ್ಯಾಖ್ಯೆಯನ್ನು ವಿವರಿಸಿರುವುದಲ್ಲದೇ, ಜವಾಬ್ದಾರಿಯನ್ನೂ ನಿಗದಿಗೊಳಿಸಿದೆ. ಸಂವಿಧಾನದಲ್ಲಿ ದೇಶವನ್ನು ಸಾರ್ವಭೌಮ, ಜಾತ್ಯತೀತ, ಸಮಾಜವಾದಿ ಮತ್ತು ಪ್ರಜಾಸತ್ತಾತ್ಮಕ ಗಣತಂತ್ರಗಳ ರಾಷ್ಟ್ರವನ್ನಾಗಿ ಘೋಷಿಸಲಾಗಿದೆ. ಪ್ರತಿಯೊಬ್ಬ ಪ್ರಜೆಗೂ ಸಮಾನತೆ, ನ್ಯಾಯ ಮತ್ತು ಸ್ವಾತಂತ್ರ್ಯ ಒದಗಿಸಲಾಗಿದೆ. ಅಲ್ಲದೆ, ಎಲ್ಲಾ ಕಾನೂನಿಗಿಂತ ಸಂವಿಧಾನವೇ ಮಿಗಿಲಾಗಿದ್ದು, ಸಂವಿಧಾನದ ಆಶಯಕ್ಕೆ ವಿರುದ್ಧವಾಗಿ ಯಾವುದೇ ಕಾನೂನು ರೂಪಿಸಲು ಸಾಧ್ಯವಿಲ್ಲವಾಗಿದೆ.

ಇಂಥಹ ಮಹೋನ್ನತ ಸಂವಿಧಾನ ರಚನೆಯಲ್ಲಿ ಪ್ರಮುಖ ಪಾತ್ರ ವಹಿಸಿದ ಡಾ. ಬಿ. ಆರ್. ಅಂಬೇಡ್ಕರ್ ಅವರ ಕೊಡುಗೆಗಳನ್ನು ಗೌರವಿಸಲು ಪ್ರತಿ ವರ್ಷ ನವೆಂಬರ್ 26 ರಂದು ಸಂವಿಧಾನ ದಿನ ಆಚರಿಸಿಕೊಂಡು ಬರಲಾಗುತ್ತಿದೆ. ನಮ್ಮ ಸಂವಿಧಾನವು 75 ವರ್ಷಗಳನ್ನು ಪೂರೈಸಿ ಇಂದಿಗೂ ತನ್ನ ಮಹತ್ವವನ್ನು ಉಳಿಸಿಕೊಂಡಿರುವುದು ಅದರ ಮಹತ್ವವನ್ನು ತೋರಿಸುತ್ತದೆ. ಕಾರಣ; ವಿಶ್ವದ ಬಹುತೇಕ ರಾಷ್ಟ್ರಗಳಲ್ಲಿ ಸ್ವಾತಂತ್ರ್ಯ ನಂತರ ಅಂಗಿಕರಿಸಲ್ಪಟ್ಟ ಅಲ್ಲಿನ ಸಂವಿಧಾನಗಳು ನಂತರ ತಮ್ಮ ಮಹತ್ವವನ್ನು ಕಳೆದುಕೊಂಡು ಬೇರೆಯೇ ಸಂವಿಧಾನಗಳನ್ನು ರಚಿಸಿ ಅಳವಡಿಸಿಕೊಂಡಿವೆ. ಈ ಕಾರಣಕ್ಕಾಗಿಯೇ ನಮ್ಮ ಸಂವಿಧಾನವನ್ನು ವಿಶ್ವದ ಶ್ರೇಷ್ಠ ಸಂವಿಧಾನಗಳಲ್ಲಿ ಒಂದು ಎಂದು ಪರಿಗಣಿಸಲಾಗಿದೆ.

ನಮ್ಮ ದೇಶದ ಮೊದಲ ರಾಷ್ಟ್ರಪತಿ ರಾಜೇಂದ್ರ ಪ್ರಸಾದ್ ಅವರು 'ಸ್ವಾತಂತ್ರ್ಯಕ್ಕಾಗಿ ನಡೆದ ಹೋರಾಟಕ್ಕಿಂತಲೂ ದೇಶ ಕಟ್ಟುವ ಈ ಪ್ರಕ್ರಿಯೆಯೇ ಮಹತ್ವಾಗಿದೆ. ಸಂವಿಧಾನ ಒಂದು ಯಂತ್ರದ ಹಾಗೆ, ಅದಕ್ಕೆ ಜೀವವಿಲ್ಲ. ಸಂವಿಧಾನವನ್ನು ಯಾರು ನಿಯಂತ್ರಿಸುತ್ತಾರೋ, ಯಾರು ಅದನ್ನು ಕಾರ್ಯಗತಗೊಳಿಸುತ್ತಾರೋ ಅವರಿಂದಲೇ ಅದಕ್ಕೆ ಜೀವ ಬರುತ್ತದೆ. ಆದ್ದರಿಂದ, ಜನರು ಆಯ್ಕೆ ಮಾಡುವ ವ್ಯಕ್ತಿ ಸದ್ಗುಣಿಯಾಗಿರಬೇಕು, ಆತನಿಗೆ ಎಲ್ಲರನ್ನೂ ಒಳಗೊಳ್ಳುವ ಗುಣ ಇರಬೇಕು. ಒಂದು ವೇಳೆ ಜನರು ಆಯ್ಕೆ ಮಾಡಿದ ವ್ಯಕ್ತಿಗೆ ಈ ಯಾವ ಗುಣಗಳೂ ಇಲ್ಲದಿದ್ದರೆ, ಸಂವಿಧಾನಕ್ಕೆ ಈ ದೇಶವನ್ನು ರಕ್ಷಿಸಲು ಸಾಧ್ಯವಿಲ್ಲ...' ಎಂದು ಗಂಭೀರವಾಗಿ ನುಡಿದ್ದರು.

ಈ ಲೇಖನದ ಮೊದಲು ಉಲ್ಲೇಖಿಸಿರುವ ಕವಿತೆಯಲ್ಲಿ ಸಂವಿಧಾನದ ಆಶಯವನ್ನು ಕಾಣಬಹುದಾಗಿದೆ. ಕವಿ ಜಿ.ಎಸ್. ಶಿವರುದ್ರಪ್ಪ ಅವರ ಈ ಕವಿತೆ ಮುಂದುವರಿದು

ನೂರು ಬಗೆಯ ಆರಾಧನೆ ಇದ್ದರು, ದೇವರೆಲ್ಲರಿಗೂ ಒಂದೇ ।
ಹಲವು ಬಣ್ಣಗಳ ಹಸುಗಳು ಕರೆಯುವ ಹಾಲಿನ ಬಿಳುಪೊಂದೇ ।
ನಡೆ-ನುಡಿ ಭೇದಗಳೆಷ್ಟೇ ಇದ್ದರೂ ಬದುಕುವ ಜನರೊಂದೇ ।
ನೆರಳು ಬೆಳಕುಗಳ ರೆಕ್ಕೆಯ ಬಿಚ್ಚುತ ಹಾರಾಡುವ ಧ್ವಜವೊಂದೇ

ನಮ್ಮ ಹೆಮ್ಮೆಯ ಸಂವಿಧಾನ ಹಾಗೂ ಧ್ವಜದಡಿ ನಾವುಗಳು ಒಂದಾಗಿ ಬಾಳೋಣ ಬನ್ನಿ.

▸▸ ಎಚ್.ಕೆ. ಪಾಟೀಲ

## ಚೈತನ್ಯ ಮಹಿಳಾ ಸಹಕಾರ ಬ್ಯಾಂಕಿಗೆ ಅತ್ಯುತ್ತಮ ಪ್ರಶಸ್ತಿ ಪ್ರಧಾನ



**ವಿಜಯಪುರ** : ಜಿಲ್ಲೆಯಲ್ಲಿ ಅತ್ಯುತ್ತಮವಾಗಿ ಕಾರ್ಯನಿರ್ವಹಿಸಿದ ಚೈತನ್ಯ ಮಹಿಳಾ ಸಹಕಾರಿ ಬ್ಯಾಂಕ್‌ಗೆ ನಗರದ ಜಿಲ್ಲಾ ಸಹಕಾರಿ ಯೂನಿಯನ್ ಸಭಾಭವನದಲ್ಲಿ ನಡೆದ ಅಂತಾರಾಷ್ಟ್ರೀಯ ಸಹಕಾರ ವರ್ಷ 2025 ಹಾಗೂ 72ನೇ ಅಖಿಲ ಭಾರತ ಸಹಕಾರ ಸಪ್ತಾಹ ಸಮಾರಂಭದಲ್ಲಿ ವಿಜಯಪುರ ಜಿಲ್ಲಾ ಸಹಕಾರ ಯೂನಿಯನ್ ವತಿಯಿಂದ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಬ್ಯಾಂಕಿನ ಪರವಾಗಿ ಪ್ರಧಾನ ವ್ಯವಸ್ಥಾಪಕರಾದ ಶ್ರೀಮತಿ ಲಕ್ಷ್ಮೀ ಬಳಗೊಂಡ, ವ್ಯವಸ್ಥಾಪಕರಾದ ಶ್ರೀಮತಿ ಮೈತ್ರಾ ಬಾಗೇವಾಡಿ ಪ್ರಶಸ್ತಿ ಸ್ವೀಕರಿಸಿದರು. ಈ ಕಾರ್ಯಕ್ರಮದಲ್ಲಿ ಕರ್ನಾಟಕ ರಾಜ್ಯ ಸಹಕಾರ ಪಟ್ಟಣ ಬ್ಯಾಂಕುಗಳ ಮಹಾಮಂಡಳದ ಹುಬ್ಬಳ್ಳಿ ದಾವಾ ಪಂಚಾಯ್ತಿ ನ್ಯಾಯಾಲಯದ ಪೀಠಾಧಿಕಾರಿಗಳಾದ ಸಹಕಾರ ಸಂಘಗಳ ಅಪರ ನಿಬಂಧಕರು (ನಿ.441) ಶ್ರೀ ಎಚ್.ವೈ. ಗದ್ದನಕೇರಿ, ವಿಜಯಪುರ ಸಹಕಾರ ಸಂಘಗಳ ಉಪನಿಬಂಧಕರಾದ ಶ್ರೀಮತಿ ಭಾಗ್ಯಶ್ರೀ ಕುಂಬಾರ, ಡಿಸಿಸಿ ಬ್ಯಾಂಕಿನ ಉಪಾಧ್ಯಕ್ಷರು, ಸಿದ್ದೇಶ್ವರ ಸಹಕಾರ ಬ್ಯಾಂಕಿನ ನಿರ್ದೇಶಕ ಮಂಡಳಿ ಮತ್ತು ಇತರ ಸಹಕಾರಿ ಬಂಧುಗಳು ಉಪಸ್ಥಿತರಿದ್ದರು.

....1ನೇ ಪುಟದಿಂದ



ಒದಗಿಸುತ್ತವೆ. ಹಾಗಾಗಿ ನಾವೆಲ್ಲಾ ಆತ್ಮನಿರ್ಭರ ಭಾರತ ನಿರ್ಮಾಣದ ಜತೆಗೆ ಸ್ವಾವಲಂಬಿ ಭಾರತ ಕಟ್ಟಬೇಕಾಗಿದೆ ಎಂದರು.

ವಿಧಾನಪರಿಷತ್ ಸಭಾಪತಿಗಳಾದ ಶ್ರೀ ಬಸವರಾಜ ಹೊರಟ್ಟಿ ರವರು ಮಾತನಾಡಿ ಜೀವನದಲ್ಲಿ ಸತ್ತು ಬದುಕಿದವರು ಕಣಗಿನಹಾಳದ ಸಿದ್ದನಗೌಡ ಸಣ್ಣರಾಮನಗೌಡ ಪಾಟೀಲರು. ಇವರ ಜೊತೆಗೆ ಕೆ.ಎಚ್. ಪಾಟೀಲರು ಸಹ ಕರ್ನಾಟಕದ ಅತ್ಯಂತ ಶ್ರೇಷ್ಠ ಗಟ್ಟಿಯಾದ ಶಕ್ತಿಯಾಗಿದ್ದರು. ಸಹಕಾರಿ ಕ್ಷೇತ್ರಕ್ಕೆ ಇಬ್ಬರು ಅಪಾರವಾದ ಕೊಡುಗೆ ನೀಡಿದ್ದಾರೆ. ವೈಯಕ್ತಿಕ ಹಿತಾಸಕ್ತಿ ಇಟ್ಟುಕೊಂಡು ಸಹಕಾರಿ ಕ್ಷೇತ್ರಕ್ಕೆ ಬರಬಾರದು. ಸ್ವಾಭಿಮಾನದಿಂದ ಸಂಘಗಳನ್ನು ಬೆಳೆಸಬೇಕು. ಸಂಘ ಬೆಳೆಸುವುದನ್ನು ಬಿಟ್ಟು ನಾವೇ ಬೆಳೆಯುವ ಸಂಘಗಳು ದೀರ್ಘಕಾಲ ಉಳಿಯುವುದಿಲ್ಲ. ಬೇಗನೇ ಹಾಳಾಗುತ್ತವೆ. ಸಹಕಾರ ಸಂಘದ ಮೂಲ ಉದ್ದೇಶವನ್ನು ಮಾದರಿಯಾಗಿ ಇಟ್ಟುಕೊಂಡು ಬೆಳೆಸಬೇಕು. ಸಹಕಾರ ತತ್ವವನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕು. ರೈತರಿಗೆ ಸಾಲ ಸೌಲಭ್ಯ ಒದಗಿಸಲು ಕೆಸಿಸಿ ಬ್ಯಾಂಕ್ ಸಂಜೀವಿನಿಯಾಗಿದೆ. ಸಹಕಾರ ಕ್ಷೇತ್ರ ಹೆಚ್ಚು ಹೆಚ್ಚು ಬೆಳೆಸಬೇಕು ಎಂದರು.

ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳದ ಅಧ್ಯಕ್ಷರು ಹಾಗೂ ಶಾಸಕರಾದ ಜಿ.ಟಿ. ದೇವೇಗೌಡರು ಮಾತನಾಡಿ, ಪ್ರತಿಯೊಂದು ವಲಯದಲ್ಲಿ ಸಹಕಾರಿ ಕ್ಷೇತ್ರದ ಹಸ್ತಕ್ಷೇಪವಿದೆ. ನಾವೆಲ್ಲ ಸಹಕಾರಿಗಳು ಪಕ್ಷಾತೀತ, ಜಾತ್ಯತೀತವಾಗಿ ಇರಬೇಕು.ಸಹಕಾರಿ ಕ್ಷೇತ್ರದಲ್ಲಿ ರಾಜಕೀಯ ಬರಬಾರದು. ಸಹಕಾರಿ ಧರ್ಮದ ಅಡಿಯಲ್ಲಿ ಕೆಲಸ ಮಾಡಬೇಕು. ಮಾನವ ಧರ್ಮ ಅಪೂರ್ವವಾಗಿ ಬಂದಿದೆ. ಎಲ್ಲರಿಗೂ ಪುಣ್ಯದ ಕೆಲಸ ಮಾಡಬೇಕು. ಯುವಕರಿಗೆ ಮಹಿಳೆಯರಿಗೆ ಸಹಕಾರಿ ಕ್ಷೇತ್ರದ ಕುರಿತು ಜಾಗೃತಿ ಮೂಡಿಸಬೇಕು. ಶಿಸ್ತು, ಶಾಂತಿಯಿಂದ ಸಹಕಾರಿ ಕ್ಷೇತ್ರ ಬೆಳೆಸಬೇಕು. ಸಹಕಾರಿ ಸದಸ್ಯರ ಜನಸಾಮಾನ್ಯರ ಹಣ ತಿಂದರೆ ಸರ್ವನಾಶ ಆಗುತ್ತೀರಿ. ಹೀಗಾಗಿ ಈ ಕ್ಷೇತ್ರದಲ್ಲಿ ಪುಣ್ಯದ ಕೆಲಸ ಮಾಡಬೇಕು.

ಕರ್ನಾಟಕ ವಿಧಾನಸಭೆಯ ಉಪಸಭಾಧ್ಯಕ್ಷರಾದ ಶ್ರೀ ರುದ್ರಪ್ಪ ಮಾನಪ್ಪ ಲಮಾಣಿ ರವರು ಮಾತನಾಡಿ ದೇಶದಲ್ಲಿ ಸಹಕಾರ ಕ್ಷೇತ್ರ ಬಹಳ ದೊಡ್ಡ ಶಕ್ತಿಯಾಗಿದೆ. ಜನಸಾಮಾನ್ಯರ ಬದುಕು ಹಸನಾಗುವ ಮೂಲಕ ಎಲ್ಲರಿಗೂ ಒಳ್ಳೆಯದಾಗಲಿ ಎಂದರು.

ಶಾಸಕ ಬಸವರಾಜ ನೀ. ಶಿವಣ್ಣನವರ, ಹಾವೇರಿ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಶ್ರೀ ಎಸ್.ಎಫ್.ಎನ್. ಗಾಜೀಗೌಡ್ರ, ಸಹಕಾರಿ ಧುರೀಣರಾದ ಶ್ರೀ ಜಿ.ಪಿ. ಪಾಟೀಲ, ಶ್ರೀ ಬಾಪುಗೌಡ ಪಾಟೀಲ, ಶ್ರೀ ಮಂಜನಗೌಡ ಪಾಟೀಲ, ಶ್ರೀ ಎಸ್. ಎಸ್.ಪಾಟೀಲ, ಶ್ರೀ ಎಂ.ಎಂ. ಹಿರೇಮಠ, ಶ್ರೀ ಶಿವಕುಮಾರಗೌಡ ಪಾಟೀಲ, ಶ್ರೀ ಶಿವಾನಂದ ಸಂಗಾಪುರ, ಶ್ರೀ ಎಂ.ಎಂ.ಮೈದೂರ, ಶ್ರೀ ಬಸವರಾಜ ಅರಬಗೊಂಡ, ಶ್ರೀ ವಿಜಯಾನಂದ ಹೊಸಕೋಟಿ, ಶ್ರೀ ಷಣ್ಮುಖಪ್ಪ ಮುಚ್ಚಂಡಿ, ಉಜ್ಜನಗೌಡ ಮಾವಿನತೋಪ, ಸಹಕಾರ ಸಂಘಗಳ ಲೆಕ್ಕಪರಿಶೋಧನಾ ಇಲಾಖೆಯ ನಿರ್ದೇಶಕರಾದ ಶ್ರೀ ಎಂ.ಡಿ. ಮಲ್ಲೂರ, ಬೆಳಗಾವಿ ಪ್ರಾಂತ ಸಹಕಾರ ಸಂಘಗಳ ಸಂಯುಕ್ತ ನಿಬಂಧಕರಾದ ಶ್ರೀ ಕಲ್ಲಪ್ಪ ಓಬಣ್ಣಗೋಳ, ಸಹಕಾರ ಸಂಘಗಳ ಉಪನಿಬಂಧಕರಾದ ಶ್ರೀ ಅಜ್ಮತ್ ಉಲ್ಲಾಖಾನ, ಧಾರವಾಡ ಕೆ.ಸಿ.ಸಿ. ಬ್ಯಾಂಕಿನ ಮುಖ್ಯಕಾರ್ಯನಿರ್ವಹಣಾಧಿಕಾರಿ ಶ್ರೀಮತಿ ಸುನೀತಾ ಸಿದ್ರಾಮ್, ಹಾವೇರಿ ಜಿಲ್ಲೆ ಸಹಕಾರ ಸಂಘಗಳ ಲೆಕ್ಕಪರಿಶೋಧನಾ ಇಲಾಖೆಯ ಉಪನಿರ್ದೇಶಕರಾದ ಶ್ರೀಮತಿ ವಿದ್ಯಾ ಹೊನ್ನಶೆಟ್ಟಿ, ಮಹಾಮಂಡಳದ ಮುಖ್ಯಕಾರ್ಯನಿರ್ವಹಣಾಧಿಕಾರಿ ಶ್ರೀ ಪುಂಡಲೀಕ ಎನ್. ಕೇರೂರೆ, ಉಪಮುಖ್ಯಕಾರ್ಯನಿರ್ವಹಣಾಧಿಕಾರಿ ಶ್ರೀ ಅನಿಲ ಎಚ್. ಕಿರೇಸೂರ ಇತರರಿದ್ದರು. ಕೆಸಿಸಿ ಬ್ಯಾಂಕ್ ನಿರ್ದೇಶಕ ಶ್ರೀ ಕೊಟ್ರೇಶಪ್ಪ ಬಸೇಗಣ್ಣಿ ಸ್ವಾಗತಿಸಿದರು. ನಾಗರಾಜ ನಡುವಿನಮಠ ನಿರೂಪಿಸಿದರು.



## ಸಹಕಾರ ಶಿಕ್ಷಣ ನಿಧಿ ಚೆಕ್ ಸಲ್ಲಿಕೆ

**ಬೆಂಗಳೂರು** : ದಿ ಗ್ರೈನ್ ಮರ್ಚೆಂಟ್ಸ್ ಕೋ–ಆಪರೇಟಿವ್ ಬ್ಯಾಂಕ್ ಲಿ., ಬೆಂಗಳೂರು ಇದರ ಸಹಕಾರ ಶಿಕ್ಷಣ ನಿಧಿ ಚೆಕ್‌ನ್ನು ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಕೆ.ಆರ್. ಆನಂದಬಾಬು ರವರು ಮಹಾಮಂಡಳದ ಮುಖ್ಯಕಾರ್ಯನಿರ್ವಹಣಾಧಿಕಾರಿ ಶ್ರೀ ಪುಂಡಲೀಕ ಎನ್. ಕೇರೂರೆಯವರಿಗೆ ಸಲ್ಲಿಸಿದರು. ಈ ಸಂದರ್ಭದಲ್ಲಿ ಬ್ಯಾಂಕಿನ ಅಧೀಕ್ಷಕರಾದ ಶ್ರೀ ಎಂ.ಮುನಿರಾಜು ಉಪಸ್ಥಿತರಿದ್ದರು.

# ಹಾವೇರಿಯಲ್ಲಿ ಜರುಗಿದ 72ನೇ ಅಖಿಲ ಭಾರತ ಸಹಕಾರ ಸಪ್ತಾಹ ದಿನಾಚರಣೆಯಲ್ಲಿ ಜಿಲ್ಲೆಯ ಸಹಕಾರ ಬ್ಯಾಂಕುಗಳಿಗೆ ಉತ್ತಮ ಸಹಕಾರ ಬ್ಯಾಂಕೆಂದು ಪ್ರಶಸ್ತಿ ನೀಡಿ ಗೌರವಿಸಲಾಯಿತು

7 ಜಿಲ್ಲೆಯಲ್ಲಿನ 01 ಸಹಕಾರ ಬ್ಯಾಂಕನ್ನು ಅತಿ ಹೆಚ್ಚು ದುಡಿಯುವ ಬಂಡವಾಳ ಹೊಂದಿರುವ ಬ್ಯಾಂಕ್ ಮತ್ತು 01 ಬ್ಯಾಂಕನ್ನು ಅತೀ ಹೆಚ್ಚು ನಿವ್ವಳ ಲಾಭ ಗಳಿಸಿರುವ ಬ್ಯಾಂಕುಗಳ ಹೆಸರು ಈ ಕೆಳಗೆ ವಿವರಿಸಲಾಗಿದೆ.

ಬೆಳಗಾವಿ ಜಿಲ್ಲೆಯ ಬೆಲ್ಲದ–ಬಾಗೇವಾಡಿ ಅರ್ಬನ್ ಸೌಹಾರ್ದ ಸಹಕಾರಿ ಬ್ಯಾಂಕ್ ನಿ., ಬೆಲ್ಲದ–ಬಾಗೇವಾಡಿ, ಬೆಳಗಾವಿ ಜಿಲ್ಲಾ ರಾಣಿ ಚೆನ್ನಮ್ಮ ಮಹಿಳಾ ಸಹಕಾರಿ ಬ್ಯಾಂಕ್ ನಿ., ಬೆಳಗಾವಿ. ಬಾಗಲಕೋಟ ಜಿಲ್ಲೆಯ ಶ್ರೀ ಬಸವೇಶ್ವರ ಕೋ–ಆಪರೇಟಿವ್ ಬ್ಯಾಂಕ್ ಲಿ., ಬಾಗಲಕೋಟೆ, ಇಳಕಲ್ ಕೋ–ಆಪರೇಟಿವ್ ಬ್ಯಾಂಕ್ ಲಿ., ಇಳಕಲ್. ಧಾರವಾಡ ಜಿಲ್ಲೆಯ ರಡ್ಡಿ ಸಹಕಾರ ಬ್ಯಾಂಕ್ ಲಿ., ಧಾರವಾಡ, ಹುಬ್ಬಳ್ಳಿ ಅರ್ಬನ್ ಕೋ–ಆಪರೇಟಿವ್ ಬ್ಯಾಂಕ್ ಲಿ., ಹುಬ್ಬಳ್ಳಿ, ಗದಗ ಜಿಲ್ಲೆಯ ಮರ್ಚೆಂಟ್ಸ್ ಲಿಬರಲ್ ಕೋ–ಆಪರೇಟಿವ್ ಬ್ಯಾಂಕ್ ಲಿ., ಗದಗ–ಬೆಟಗೇರಿ, ದಿ ಅರ್ಬನ್ ಕೋ–ಆಪರೇಟಿವ್ ಬ್ಯಾಂಕ್ ಲಿ., ಗದಗ, ಹಾವೇರಿ ಜಿಲ್ಲೆಯ ಶ್ರೀ ಗಜಾನನ ಅರ್ಬನ್ ಕೋ–ಆಪರೇಟಿವ್ ಬ್ಯಾಂಕ್ ಲಿ., ಬ್ಯಾಡಗಿ, ದಿ ಕಾರ್ಡಮಮ್ ಮರ್ಚೆಂಟ್ಸ್ ಕೋ–ಆಪರೇಟಿವ್ ಬ್ಯಾಂಕ್ ಲಿ., ಹಾವೇರಿ, ಶ್ರೀ ಬಸವೇಶ್ವರ ಅರ್ಬನ್ ಕೋ–ಆಪರೇಟಿವ್ ಬ್ಯಾಂಕ್ ಲಿ., ರಾಣೆಬೆನ್ನೂರು, ಪ್ರಿಯದರ್ಶಿನಿ ಮಹಿಳಾ ಅರ್ಬನ್ ಸಹಕಾರಿ ಬ್ಯಾಂಕ್ ನಿ., ಹಾವೇರಿ, ವಿಜಯಪುರ ಜಿಲ್ಲೆಯ ಶ್ರೀ ಸಿದ್ದೇಶ್ವರ ಕೋ–ಆಪರೇಟಿವ್ ಬ್ಯಾಂಕ್ ಲಿ., ವಿಜಯಪುರ, ಚೈತನ್ಯ ಮಹಿಳಾ ಸಹಕಾರಿ ಬ್ಯಾಂಕ್ ನಿ., ವಿಜಯಪುರ, ಉತ್ತರ ಕನ್ನಡ ಜಿಲ್ಲೆಯ ದಿ ಶಿರಸಿ ಅರ್ಬನ್ ಕೋ–ಆಪರೇಟಿವ್ ಬ್ಯಾಂಕ್ ಲಿ., ದಿ ಭಟ್ಕಳ ಅರ್ಬನ್ ಕೋ–ಆಪರೇಟಿವ್ ಬ್ಯಾಂಕ್ ಲಿ., ಭಟ್ಕಳ ಈ ಬ್ಯಾಂಕುಗಳಿಗೆ ಜಿಲ್ಲೆಯ ಉತ್ತಮ ಸಹಕಾರ ಬ್ಯಾಂಕುಗಳೆಂದು ಪ್ರಶಸ್ತಿ ನೀಡಿ ಗೌರವಿಸಲಾಯಿತು.







## ಶ್ರೀ ಕಾಳಿದಾಸ ಸಹಕಾರ ಬ್ಯಾಂಕಿನಲ್ಲಿ ಸಹಕಾರ ಸಪ್ತಾಹ ಆಚರಣೆ




ಶ್ರೀ ಕಾಳಿದಾಸ ಸಹಕಾರ ಬ್ಯಾಂಕ್ ನಿಯಮಿತ, ಗಾಂಧಿನಗರ, ಬೆಂಗಳೂರು, ಇಲ್ಲಿ ಸಹಕಾರ ಸಪ್ತಾಹ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು, ಈ ಸಂದರ್ಭದಲ್ಲಿ ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಕೆ.ಸಿ. ಕೃಷ್ಣಪ್ಪರವರು, ಉಪಾಧ್ಯಕ್ಷರಾದ ಶ್ರೀಮತಿ ವೈ.ಸರೋಜಮ್ಮ ರವರು ಹಾಗೂ ಬ್ಯಾಂಕಿನ ನಿರ್ದೇಶಕರು ಹಾಗೂ ಸಿಬ್ಬಂದಿ ವರ್ಗದವರು ಹಾಜರಿದ್ದರು.

# ವಿಶ್ವಕರ್ಮ ಬ್ಯಾಂಕಿನಿಂದ ಸಮಾಜಮುಖಿ ಕಾರ್ಯ– ಡಾ. ದೇವದಾಸ್ ರೈ




**ಮಂಗಳೂರು** : ವಿಶ್ವಕರ್ಮ ಸಹಕಾರ ಬ್ಯಾಂಕ್ ಮೂಲಭೂತವಾಗಿ ಒಂದು ಆರ್ಥಿಕ ಸಂಸ್ಥೆ. ಆದರೆ ಆರ್ಥಿಕ ಕಾರ್ಯ ಚಟುವಟಿಕೆಗಳ ಜೊತೆಗೆ ಸಮಾಜಮುಖಿಯಾಗಿಯೂ ಕಾರ್ಯ ತತ್ಪರವಾಗಿರುವುದು ಅತ್ಯಂತ ಸಂತಸದ ವಿಚಾರವಾಗಿದೆ. ಸ್ವಚ್ಛತೆಯಂತಹ ಸಮಾಜದ ಮೂಲಭೂತ ಸಂಗತಿಗಳನ್ನು ಕೈಗೆತ್ತಿಕೊಂಡು ಸಾಮಾಜಿಕ ಜಾಗೃತಿಯ ಸ್ವಚ್ಛ ಭಾರತ್ ಕಾರ್ಯವನ್ನು ನಿರಂತರವಾಗಿ ಬ್ಯಾಂಕ್ ಮಾಡುತ್ತಿರುವುದು ಸ್ತುತ್ಯಾರ್ಹ ಸಂಗತಿಯಾಗಿದೆ ಎಂದು ರೋಟೇರಿಯನ್ ಪಿಡಿಜಿ ಡಾ.ದೇವದಾಸ್ ರೈ ಅವರು ಹೇಳಿದರು.

ಅವರು ವಿಶ್ವಕರ್ಮ ಸಹಕಾರ ಬ್ಯಾಂಕ್ "ಸ್ವಚ್ಛತಾ ಹೀ ಸೇವಾ" ಧ್ಯೇಯದೊಂದಿಗೆ ಆಯೋಜಿಸಿರುವ ಸ್ವಚ್ಛ ಭಾರತ ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡುತ್ತಿದ್ದರು. ಈ ಸಂದರ್ಭದಲ್ಲಿ ಮತನಾಡಿದ ರೋಟರಿ ಕ್ಲಬ್ ಮಂಗಳೂರು ಕೇಂದ್ರ ಇದರ ಅಧ್ಯಕ್ಷರಾದ ಶ್ರೀ ಭಾಸ್ಕರ್ ರೈ ಕಟ್ಟಾ ಅವರು ಸ್ವಚ್ಛ ಭಾರತ್ ನಂತಹ ಸಾಮಾಜಿಕ ಕಾರ್ಯಗಳು ಜನರ ಪರಿಣಾಮಕಾರಿ ಭಾಗೀದಾರಿಕೆಯಿಂದ ಮಾತ್ರ ಯಶಸ್ವಿಯಾಗಲು ಸಾಧ್ಯ. ಆದುದರಿಂದ ವಿಶ್ವಕರ್ಮ ಬ್ಯಾಂಕ್ ಆಯೋಜಿಸಿರುವ ಈ ಸಾಮಾಜಿಕ ಕಾರ್ಯದಲ್ಲಿ ನಮ್ಮಂತಹ ಸಂಘಟನೆಗಳು ಕೈಜೋಡಿಸಿ ಯಶಸ್ವಿಗೊಳಿಸಬೇಕು ಎಂದು ಕರೆ ನೀಡಿದರು.

ವಿಶ್ವಕರ್ಮ ಬ್ಯಾಂಕಿನ ಅಧ್ಯಕ್ಷರಾದ ಡಾ.ಎಸ್ ಆರ್ ಹರೀಶ್ ಆಚಾರ್ಯ, ರೋಟೇರಿಯನ್ ಡಾ.ದೇವದಾಸ್ ರೈ, ಅವೇಕ್ ಕುಡ್ಲಾ ಇದರ ಸಂಯೋಜಕರಾದ ಶ್ರೀ ಕಮಲಾಕ್ಷ ಪೈ, ರೋಟರಿ ಕ್ಲಬ್ ಮಂಗಳೂರು ಕೇಂದ್ರ ಇದರ ಅಧ್ಯಕ್ಷರಾದ ಶ್ರೀ ಭಾಸ್ಕರ್ ರೈ ಕಟ್ಟಾ ಇವರುಗಳು ಹಸಿರು ನಿಶಾನೆ ತೋರುವ ಮೂಲಕ ಸ್ವಚ್ಛ ಭಾರತ್ ಶ್ರಮದಾನವು ಪ್ರಾರಂಭವಾಯಿತು. ಮಂಗಳೂರಿನ ರಥಬೀದಿ, ಕಾಳಿಕಾಂಬ ದೇವಸ್ಥಾನ ರಸ್ತೆ, ಮುಖ್ಯಪ್ರಾಣ ದೇವಸ್ಥಾನ ರಸ್ತೆ, ಫ್ಲವರ್ ಮಾರ್ಕೆಟ್, ಅಜೀಜುದ್ದೀನ್ ರಸ್ತೆ, ಬಸವನಗುಡಿ ರಸ್ತೆ, ನ್ಯೂಚಿತ್ರಾ ಟಾಕೀಸ್ ಪರಿಸರದಲ್ಲಿ ಸ್ವಯಂ ಸೇವಕರು ಸ್ವಚ್ಛತೆಯ ಕಾರ್ಯವನ್ನು ನಡೆಸಿದರು.

ಈ ಸಂದರ್ಭದಲ್ಲಿ ಶ್ರಮದಾನದಲ್ಲಿ ಭಾಗವಹಿಸಿದ ಚಿಂತಕ ಶ್ರೀ ಅರವಿಂದ ಚೊಕ್ಕಾಡಿಯವರು ಸ್ವಚ್ಛತೆ ಎನ್ನುವುದು ಮಹಾತ್ಮಾ ಗಾಂಧೀಜಿಯವರ ಕನಸಿನ ಭಾಗವಾದರೂ ಅದು ಪ್ರಕೃತಿದತ್ತವಾದುದಾಗಿದೆ. ಮಾನವ ಜೀವನದ ಸಂಪೂರ್ಣ ಜೈವಿಕ ಪರಿಸರದ ಶುಚಿತ್ವವನ್ನು ಕಾಪಾಡಬೇಕಾದದ್ದು ಎಷ್ಟು ಮುಖ್ಯವೋ, ನಮ್ಮ ಗುಣ, ನಡತೆ, ವ್ಯವಹಾರದಲ್ಲಿಯೂ ಶುಚಿತ್ವವನ್ನು ಕಾಪಾಡುವುದು ಕೂಡಾ ಅಷ್ಟೇ ಮುಖ್ಯ ಎಂದು ಕರೆ ನೀಡಿದರು.

ಬ್ಯಾಂಕಿನ ನಿರ್ದೇಶಕರಾದ ಶ್ರೀ ಹರಿಪ್ರಸಾದ್, ಕೆನರಾ ಕಾಲೇಜು ರಾಷ್ಟ್ರೀಯ ಸೇವಾ ಯೋಜನೆಯ ಘಟಕದ ಯೋಜನಾಧಿಕಾರಿಗಳಾದ ಶ್ರೀಮತಿ ಸುಶಾಮಾ, ಶ್ರೀಮತಿ ಸೀಮಾ ಸಿ ಹಾಗೂ ವಿದ್ಯಾರ್ಥಿಗಳು, ವಿಶ್ವವಿದ್ಯಾನಿಲಯ ಕಾಲೇಜಿನ ಉಪನ್ಯಾಸಕರಾದ ಶ್ರೀಮತಿ ಪುಷ್ಪಲತಾ, ರೋಟರಿ ಕ್ಲಬ್ ಮಂಗಳೂರು ಕೇಂದ್ರದ ಶ್ರೀ ರಾಜಗೋಪಾಲ್ ರೈ, ಶ್ರೀ ಸಾಯಿ ಬಾಬಾ ಮತ್ತು ಸದಸ್ಯರು, ಅವೇಕ್ ಕುಡ್ಲದ ಶ್ರೀ ಪುನೀತ್ ಮತ್ತು ಸಂಗಡಿಗರು, ದ.ಕ. ಜಿಲ್ಲಾ ಚಿನ್ನದ ಕೆಲಸಗಾರರ ಸಂಘದ ಅಧ್ಯಕ್ಷರಾದ ಶ್ರೀ ಕೆ. ಎಲ್. ಹರೀಶ್, ಶ್ರೀ ಉದಯ ಆಚಾರ್ಯ ಮತ್ತು ಸದಸ್ಯರು, ಕಾಳಿಕಾಂಬಾ ಸೇವಾ ಸಮಿತಿಯ ಶ್ರೀ ಜಗದೀಶ್ ಸಿದ್ದಕಟ್ಟೆ, ಶ್ರೀ ರವೀಂದ್ರ ಮಂಗಳಾದೇವಿ, ಶ್ರೀ ರವೀಂದ್ರ ಎಸ್. ಮತ್ತು ಸದಸ್ಯರು, ಗುರುಸೇವಾ ಪರಿಷತ್ತಿನ ಶ್ರೀ ಗಣೇಶ್ ಕೆಮ್ಮಣ್ಣು, ಶ್ರೀ ಕೆ.ಜೆ. ಗುರುರಾಜ್, ಶ್ರೀ ಶೇಖರ ಆಚಾರ್ಯ ಮತ್ತು ಸದಸ್ಯರು, ಬ್ಯಾಂಕಿನ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ವಸಂತ ಆಡ್ಯಂತಾಯ ಮತ್ತು ಬ್ಯಾಂಕಿನ ಸಿಬ್ಬಂದಿಗಳು ಸ್ವಯಂ ಸೇವಕರಾಗಿ ಭಾಗವಹಿಸಿದ್ದರು. ಸ್ವಚ್ಛ ಭಾರತ್ ಶ್ರಮದಾನದ ಸಂಚಾಲಕರಾದ ಶ್ರೀ ಪ್ರಕಾಶ್ ಆಚಾರ್ಯ ಹಲೇಜಿ ಇವರು ಶ್ರಮದಾನದ ಕಾರ್ಯಕ್ರಮವನ್ನು ಅಚ್ಚುಕಟ್ಟಾಗಿ ನಿರ್ವಹಿಸಿದರು.

## ಬೆಂಗಳೂರಿನಲ್ಲಿ ಪಟ್ಟಣ ಸಹಕಾರ ಬ್ಯಾಂಕುಗಳ ಅಧ್ಯಕ್ಷರು /ಉಪಾಧ್ಯಕ್ಷರು /ನಿರ್ದೇಶಕರು ಮತ್ತು ಮುಖ್ಯಕಾರ್ಯನಿರ್ವಹಣಾಧಿಕಾರಿಗಳಿಗೆ ಮತ್ತು ಅಧಿಕಾರಿಗಳಿಗೆ ದಿನಾಂಕ : 05.12.2025ರಂದು ಒಂದು ದಿನದ ರಾಜ್ಯಮಟ್ಟದ ವಿಚಾರ ಸಂಕಿರಣ

ಆಧುನಿಕ ಬ್ಯಾಂಕಿಂಗ್ ಕ್ಷೇತ್ರದಲ್ಲಿ ಹೊಸ ಹೊಸ ತಂತ್ರಜ್ಞಾನಗಳು ದಿನನಿತ್ಯ ಹೊರಬರುತ್ತಿದ್ದು, ಅದಕ್ಕೆ ಅನುಗುಣವಾಗಿ ನಮ್ಮ ಪಟ್ಟಣ ಸಹಕಾರ ಬ್ಯಾಂಕುಗಳು ಅವುಗಳನ್ನು ಅಳವಡಿಸಿಕೊಂಡು ತಮ್ಮ ಗ್ರಾಹಕರಿಗೆ ಉತ್ತಮ ಸೇವೆ ನೀಡಬೇಕಾಗಿರುತ್ತದೆ. ಈ ಹಿನ್ನಲೆಯಲ್ಲಿ ದಿನಾಂಕ : 05.12.2025ರಂದು "Bharat Network Group" ಸಂಸ್ಥೆಯೊಂದಿಗೆ ಮಹಾಮಂಡಳವು ಬೆಂಗಳೂರಿನ "The Capitol Hotel" No-3, Raj Bhavan Rd, Vasanth Nagar, Bengaluru- 560001 ಇಲ್ಲಿ Tech-Drive Trust: Building the Future of Cooperative Banking ವಿಷಯಗಳ ಕುರಿತು ವಿಚಾರ ಸಂಕಿರಣವನ್ನು ಏರ್ಪಡಿಸಲಾಗಿರುತ್ತದೆ.

ಸದರಿ ವಿಚಾರ ಸಂಕಿರಣದಲ್ಲಿ ಆಧುನಿಕ ಬ್ಯಾಂಕಿಂಗ್ ವಿಷಯಗಳ ಕುರಿತು ಉಪನ್ಯಾಸ ನೀಡಿ, ಚರ್ಚಿಸಲಾಗುವುದು. ಈ ಸದರಿ ವಿಚಾರ ಸಂಕಿರಣದಲ್ಲಿ ಅಧ್ಯಕ್ಷರು / ಉಪಾಧ್ಯಕ್ಷರು / ನಿರ್ದೇಶಕರು ಮತ್ತು ಮುಖ್ಯಕಾರ್ಯನಿರ್ವಹಣಾಧಿಕಾರಿಗಳಿಗೆ ಮತ್ತು ಅಧಿಕಾರಿಗಳಿಗೆ ಆಯೋಜಿಸಲಾಗಿದ್ದು. ಒಂದು ಬ್ಯಾಂಕಿನಿಂದ ಗರಿಷ್ಠ ನಾಲ್ಕು ಪ್ರತಿನಿಧಿಗಳು ಮಾತ್ರ ಭಾಗವಹಿಸಲು ಅವಕಾಶ ಕಲ್ಪಿಸಲಾಗಿದೆ. ಈ ವಿಚಾರ ಸಂಕಿರಣವನ್ನು ದಿನಾಂಕ : 05.12.2025ರಂದು ಬೆಳಿಗ್ಗೆ 08.30 ಗಂಟೆಗೆ ಉಪಹಾರ ಮತ್ತು ನೋಂದಣಿಯೊಂದಿಗೆ ಪ್ರಾರಂಭಿಸಲಾಗುವುದು. ಈ ವಿಚಾರ ಸಂಕಿರಣದಲ್ಲಿ ಭಾಗವಹಿಸುವ ಪ್ರತಿನಿಧಿಗಳು ದಿನಾಂಕ : 29.11.2025 ರೊಳಗಾಗಿ ಕಡ್ಡಾಯವಾಗಿ ನೋಂದಾಯಿಸಿಕೊಳ್ಳಲು ಕೋರಲಾಗಿದೆ. ನೇರವಾಗಿ ಬಂದ ಪ್ರತಿನಿಧಿಗಳಿಗೆ ಪ್ರವೇಶ ಇರುವುದಿಲ್ಲ. ಈ ವಿಚಾರ ಸಂಕಿರಣದಲ್ಲಿ ತಪ್ಪದೇ ಭಾಗವಹಿಸಿ ಇದರ ಸದುಪಯೋಗ ಪಡೆದುಕೊಳ್ಳಬೇಕೆಂದು ವಿನಂತಿಸಲಾಗಿದೆ.

# ಎಂಸಿಸಿ ಬ್ಯಾಂಕಿನಲ್ಲಿ ಅರ್ಧ ವಾರ್ಷಿಕ ಕಾರ್ಯಕ್ಷಮತೆ ವಿಮರ್ಶೆ ಮತ್ತು ಸೈಬರ್ ಭದ್ರತಾ ಜಾಗೃತಿ ಕಾರ್ಯಕ್ರಮ







**ಮಂಗಳೂರು :** ಎಂಸಿಸಿ ಬ್ಯಾಂಕ್ ತನ್ನ ಅರ್ಧ ವಾರ್ಷಿಕ ಕಾರ್ಯಕ್ಷಮತೆ ವಿಮರ್ಶೆ ಮತ್ತು ಸೈಬರ್ ಭದ್ರತಾ ಜಾಗೃತಿ ಕಾರ್ಯಕ್ರಮವನ್ನು "ಸೈಬರ್ ಸೇಫ್ ಬ್ಯಾಂಕ್" ಎಂಬ ಶೀರ್ಷಿಕೆಯೊಂದಿಗೆ ನವೆಂಬರ್ 8, 2025ರಂದು ಮಂಗಳೂರಿನ ಆಡಳಿತ ಕಚೇರಿಯ ಪಿ.ಎಫ್.ಎಕ್ಸ್.ಸಲ್ಡಾನಾ ಸ್ಮಾರಕ ಸಭಾಂಗಣದಲ್ಲಿ ನಡೆಸಿತು. ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಅನಿಲ್‌ಲೋಬೊ ಕಾರ್ಯಕ್ರಮದ ಅಧ್ಯಕ್ಷತೆವಹಿಸಿದ್ದರು. ಬೋಂದೆಲ್‌ನ ಸೇಂಟ್ ಲಾರೆನ್ಸ್ ಚರ್ಚ್‌ನ ಧರ್ಮಗುರು ವಂದನೀಯ ಫಾ। ಆಂಡ್ರ್ಯೂ ಲಿಯೋ ಡಿ'ಸೋಜಾ ಮುಖ್ಯ ಅತಿಥಿಯಾಗಿದ್ದರು. Principal Investigator & Cyber Security Expert ಡಾ। ಅನಂತ್ ಪ್ರಭು, ಬ್ಯಾಂಕಿನ ಮಹಾ ಪ್ರಬಂಧಕ ಶ್ರೀ ಸುನಿಲ್ ಮಿನೇಜಸ್ ವೇದಿಕೆಯಲ್ಲಿ ಹಾಜರಿದ್ದರು. ಕಾರ್ಯಕ್ರಮವನ್ನು ದೀಪಬೆಳಗಿಸುವ ಮೂಲಕ ಉದ್ಘಾಟಿಸಲಾಯಿತು.

ಅಧ್ಯಕ್ಷೀಯ ಭಾಷಣದಲ್ಲಿ, ಅಧ್ಯಕ್ಷರಾದ ಶ್ರೀ ಅನಿಲ್‌ಲೋಬೊ ಅವರು ತಮ್ಮ ಸಮರ್ಪಿತ ಪ್ರಯತ್ನಗಳಿಂದ ಗುರಿಗಳನ್ನು ಸಾಧಿಸಿದ ಬ್ಯಾಂಕಿನ ಶಾಖಾ ಸಿಬ್ಬಂದಿಗಳನ್ನು ಅಭಿನಂದಿಸಿದರು. ಬ್ಯಾಂಕಿನ ಪ್ರಗತಿಗೆ ಅಡ್ಡಿಯಾಗುವ ಸಮಸ್ಯೆಗಳನ್ನು ಪರಿಹರಿಸುವ ಅಗತ್ಯವನ್ನು ಅವರು ಒತ್ತಿ ಹೇಳಿ ನಿರಂತರ ಬೆಳವಣಿಗೆಯನ್ನು ಸಾಧಿಸಲು ಗಮನ ಹರಿಸಬೇಕಾದ ಪ್ರಮುಖ ಕ್ಷೇತ್ರಗಳನ್ನು ವಿವರಿಸಿದರು. ಕಾರ್ಯಾಚರಣೆಯ ಕಾರ್ಯಕ್ಷಮತೆಯ ಮೇಲೆ ಪರಿಣಾಮ ಬೀರುವ ಅಸಮರ್ಥತೆಯನ್ನು ಗುರುತಿಸಿ ಸರಿಪಡಿಸುವಂತೆ ಅವರು ಎಲ್ಲಾ ಸಿಬ್ಬಂದಿ ಸದಸ್ಯರನ್ನು ಒತ್ತಾಯಿಸಿದರು.

ನಿರ್ದೇಶಕರಾದ ಶ್ರೀ ಹೆರಾಲ್ಡ್ ಮೊಂತೇರೋ, ಶ್ರೀ ರೋಶನ್ ಡಿ'ಸೋಜಾ, ಶ್ರೀ ಮೆಲ್ವಿನ್ ವಾಸ್, ಶ್ರೀ ಫೆಲಿಕ್ಸ್ ಡಿ'ಕ್ರೂಜ್, ಕ್ರೆಡಿಟ್ ಸಲಹೆಗಾರ ಶ್ರೀಮತಿ ಸೆಲೆಸ್ಟಿನ್ ಲೀನಾ ಮೊಂತೇರೋ, ಐಟಿ ಸಲಹೆಗಾರ ಶ್ರೀ ರೋಶನ್ ಮಾಡ್ತಾ ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

ಕಾರ್ಯಕ್ರಮವು ಸಿಬ್ಬಂದಿಗಳ ನೇತೃತ್ವದ ಪ್ರಾರ್ಥನಾ ಗೀತೆಯೊಂದಿಗೆ ಪ್ರಾರಂಭವಾಯಿತು. ಬ್ಯಾಂಕಿನ ಪ್ರಧಾನ ವ್ಯವಸ್ಥಾಪಕ ಶ್ರೀ ಸುನಿಲ್ ಮಿನೇಜಸ್ ಅವರು ಧನ್ಯವಾದಗಳನ್ನು ಅರ್ಪಿಸಿದರು. ಕಂಕನಾಡಿ ಶಾಖೆಯ ಕ್ರೆಡಿಟ್ ಅಧಿಕಾರಿ ಶ್ರೀ ಸ್ಟೀವನ್ ಡಿ'ಸಿಲ್ವಾ ಕಾರ್ಯಕ್ರಮವನ್ನು ನಿರೂಪಿಸಿದರು.

ಎಲ್ಲಾ ಸಿಬ್ಬಂದಿ ಸದಸ್ಯರು ಕಾರ್ಯಕ್ಷಮತೆ ವಿಮರ್ಶೆ ಮತ್ತು ಸೈಬರ್ ಭದ್ರತಾ ಜಾಗೃತಿ ಕಾರ್ಯಕ್ರಮದಲ್ಲಿ ಹೆಚ್ಚಿನ ಉತ್ಸಾಹದಿಂದ ಸಕ್ರಿಯವಾಗಿ ಭಾಗವಹಿಸಿದರು.



**ಬೆಂಗಳೂರು :** ಗೋಕರ್ಣದ ಮಹಾಬಲೇಶ್ವರ ಸಹಕಾರ ಬ್ಯಾಂಕ್ ಇದರ ಸಹಕಾರ ಶಿಕ್ಷಣ ನಿಧಿ ಚೆಕ್‌ನ್ನು ಬ್ಯಾಂಕಿನ ಮುಖ್ಯಕಾರ್ಯನಿರ್ವಹಣಾಧಿಕಾರಿ ಶ್ರೀ ಆನಂದ ಕಿಶೋರ್ ಗಾಂವಕರ ರವರು ಮಹಾಮಂಡಳದ ಪ್ರಭಾರ ಅಧೀಕ್ಷಕರಾದ ಶ್ರೀ ಆರ್.ಹೆಚ್. ಕುಮಾರ್‌ರವರಿಗೆ ಸಲ್ಲಿಸಿದರು.



ಶ್ರೀ ಸಿದ್ದೇಶ್ವರ ಸಹಕಾರ ಬ್ಯಾಂಕ್, ವಿಜಯಪುರ ಇದರ ಸಹಕಾರ ಶಿಕ್ಷಣ ನಿಧಿ ಚೆಕ್‌ನ್ನು ಬ್ಯಾಂಕಿನ ಉಪಾಧ್ಯಕ್ಷರಾದ ಶ್ರೀ ಗುರುರಾಜ ಎಸ್. ಗಂಗನಳ್ಳಿ, ನಿರ್ದೇಶಕರುಗಳಾದ ಶ್ರೀ ರಾಜೇಂದ್ರ ಎಮ್.ಪಾಟೀಲ, ಶ್ರೀ ಸುರೇಶ ಜಿ. ಗಜ್ಜಿನಕಟ್ಟಿ, ಶ್ರೀಮತಿ ಸೌಭಾಗ್ಯ ಎಸ್. ಭೋಗಶೆಟ್ಟಿ ರವರುಗಳು ಮಹಾಮಂಡಳದ ಮುಖ್ಯಕಾರ್ಯನಿರ್ವಹಣಾಧಿಕಾರಿ ಶ್ರೀ ಪುಂಡಲೀಕ ಎನ್. ಕೇರೂರೆಯವರಿಗೆ ಸಲ್ಲಿಸಿದರು.

# ಪುತ್ತೂರು ಕೋ-ಆಪರೇಟಿವ್ ಟೌನ್ ಬ್ಯಾಂಕ್‌ನಲ್ಲಿ ನೂತನ ವೆಬ್‌ಸೈಟ್ ಹಾಗೂ ಸ್ಟೇಷನರಿ / ರೆಕಾರ್ಡ್ ರೂಮ್ ಉದ್ಘಾಟನೆ






**ಪುತ್ತೂರು:** ಪುತ್ತೂರು ಕೋ-ಆಪರೇಟಿವ್ ಟೌನ್ ಬ್ಯಾಂಕ್ ವತಿಯಿಂದ ದಿನಾಂಕ 14-11-2025 ರಂದು ಎರಡು ಪ್ರಮುಖ ಕಾರ್ಯಕ್ರಮಗಳನ್ನು ಭವ್ಯವಾಗಿ ನಡೆಸಲಾಯಿತು. ಬ್ಯಾಂಕಿನ ನೂತನ ವೆಬ್‌ಸೈಟ್ ಮತ್ತು ಸ್ಟೇಷನರಿ ಹಾಗೂ ರೆಕಾರ್ಡ್ ರೂಮ್ ಅನ್ನು ಅಧಿಕೃತವಾಗಿ ಉದ್ಘಾಟಿಸಲಾಯಿತು.

ಬ್ಯಾಂಕಿನ ಅಧ್ಯಕ್ಷ ಎನ್. ಕಿಶೋರ್ ಕೊಳತ್ತಾಯ ಅವರು ಬ್ಯಾಂಕಿನ ನೂತನ ವೆಬ್‌ಸೈಟ್‌ನ್ನು ಅಂತರ್ಜಾಲದಲ್ಲಿ ಅನಾವರಣಗೊಳಿಸಿ ಗ್ರಾಹಕರು ಮತ್ತು ಸದಸ್ಯರಿಗೆ ಇದು ಬಹು ಉಪಯುಕ್ತವಾಗಲಿದೆ ಎಂದು ತಿಳಿಸಿದರು. ಸಂಪೂರ್ಣ ಮಾಹಿತಿಯನ್ನು ಒಳಗೊಂಡಿರುವ ಈ ವೆಬ್‌ಸೈಟ್ ಮುಖಾಂತರ ಬ್ಯಾಂಕಿನ ವಿವಿಧ ಸೇವೆಗಳು, ಯೋಜನೆಗಳು ಮತ್ತು ಮಾಹಿತಿ ಸಾರ್ವಜನಿಕರಿಗೆ ಸುಲಭವಾಗಿ ಲಭ್ಯವಾಗಲಿದೆ. ಅವರು ಬ್ಯಾಂಕಿನ ನೂತನ ಸುಸಜ್ಜಿತ ಸ್ಟೇಷನರಿ ಮತ್ತು ರೆಕಾರ್ಡ್ ರೂಮ್ ಕೂಡ ಉದ್ಘಾಟಿಸಿದರು.

ಕಾರ್ಯಕ್ರಮವನ್ನು ಬ್ಯಾಂಕಿನ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಬಿ.ಶೇಖರ ಶೆಟ್ಟಿ ಅವರು ಕಾರ್ಯಕ್ರಮ ನಿರ್ವಹಿಸಿ ಮಾತನಾಡಿ, ನೂತನ ವೆಬ್‌ಸೈಟ್ ಭೇಟಿ ನೀಡುವ ಮೂಲಕ ಬ್ಯಾಂಕಿನ ಸೌಲಭ್ಯಗಳು ಮತ್ತು ಪ್ರಯೋಜನಗಳ ಬಗ್ಗೆ ಜನಸಾಮಾನ್ಯರು ಸಂಪೂರ್ಣ ಮಾಹಿತಿ ಪಡೆಯಬಹುದು ಎಂದು ತಿಳಿಸಿದರು.

ಬ್ಯಾಂಕಿನ ಉಪಾಧ್ಯಕ್ಷ ಶ್ರೀಧರ ಗೌಡ, ನಿರ್ದೇಶಕರಾದ ಬಪ್ಪಳಿಗೆ ಚಂದ್ರಶೇಖರ ರಾವ್, ಕಿರಣ್ ಕುಮಾರ್ ರೈ, ರಾಜು ಶೆಟ್ಟಿ, ರಾಮಚಂದ್ರ ಕಾಮತ್, ಮಲ್ಲೇಶ್ ಕುಮಾರ್, ಸಿ.ಎ. ಅರವಿಂದ ಕೃಷ್ಣ, ಗಣೇಶ ಕೌಕ್ರಾಡಿ, ಶ್ರೀಮತಿ ಸೀಮಾ ಎ.ಎ., ಶ್ರೀಮತಿ ವೀಣಾ ಮೊದಲಾದವರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ಬ್ಯಾಂಕಿನ ನೂತನ ವೆಬ್ ಸೈಟ್ ವಿಳಾಸ: www.putturtownbank.com ಸಂಯೋಜನೆಯನ್ನು ರಾಮಚಂದ್ರ ಶೆಣೈ ನಿರ್ವಹಿಸಿ ವಿವರ ನೀಡಿದರು. ಪುತ್ತೂರು ಶಾಖೆಯ ಶಾಖಾಧಿಕಾರಿ ಚಿದಂಬರ, ವಿಟ್ಲ ಶಾಖೆಯ ಶಾಖಾಧಿಕಾರಿ ಜ್ಯೋತಿ ಎನ್.ಎಸ್. ಮತ್ತು ಸಿಬ್ಬಂದಿ ವರ್ಗ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು




## ನಿಮ್ಮ ಪ್ರಶ್ನೆ ನಮ್ಮ ಉತ್ತರ

**ಸುಧಾಕರ್ ಭಟ್,** ಬ್ಯಾಂಕಿಂಗ್ ಸಲಹೆಗಾರರು.



**01. ನಮ್ಮ ಉಪವಿಧಿಯಲ್ಲಿ ಸದಸ್ಯನಾದವನು ಆಧಾರ ರಹಿತ ಸಾಲ ಪಡೆಯುವಲ್ಲಿ ಸಾಲದ ಮೊಬಲಗಿನ ಶೇ. 5ರಷ್ಟು ಷೇರುಗಳನ್ನು ಪಡೆದಿರತಕ್ಕದ್ದು ಮತ್ತು ಭದ್ರತೆಯ ಮೇಲೆ ಸಾಲ ಪಡೆಯುವವರು ಆ ಸಾಲದ ಶೇಕಡಾ ಎರಡೂವರೆಯಷ್ಟು ಷೇರುಗಳನ್ನು ಪಡೆದಿರಬೇಕು ಎಂದು ಸೂಚಿಸಲಾಗಿದೆ. ಕಳೆದ 10 ವರ್ಷಗಳಿಂದ ನಮ್ಮ ಬ್ಯಾಂಕಿನ ಸಿ.ಆರ್.ಎ.ಆರ್. ಶೇ.20 ರಷ್ಟಕ್ಕಿಂತ ಅಧಿಕವಿದೆ. ನಮ್ಮ ಬ್ಯಾಂಕಿನ ಆಡಳಿತ ಮಂಡಳಿ ಭದ್ರತೆಯ ಮೇಲೆ ನೀಡುವ ಸಾಲದ ಮೇಲೆ ಪಡೆಯುವ ಷೇರಿನ ಪ್ರಮಾಣವನ್ನು ಸಾಲದ ಶೇಕಡಾ ಒಂದರಷ್ಟಕ್ಕೆ ಇಳಿಸಲು ಯೋಚಿಸುತ್ತಿದೆ. ಈ ನಿರ್ಧಾರವನ್ನು ಕಾರ್ಯಗತಗೊಳಿಸುವ ಮಾರ್ಗವನ್ನು ಸೂಚಿಸಿ.**

**- ಪಟ್ಟಣ ಸಹಕಾರ ಬ್ಯಾಂಕ್ ಲಿ., ಬೆಂಗಳೂರು.**

**ಉತ್ತರ :** ರಿಜರ್ವ್ ಬ್ಯಾಂಕಿನ ಮಾರ್ಗಸೂಚಿಯಂತೆ, ಆಯಾ ಬ್ಯಾಂಕಿಗೆ ಅನ್ವಯವಾಗುವ ಸಿ.ಆರ್.ಎ.ಆರ್. ಹೊಂದಿದ್ದರೆ ಪಡೆಯುವ ಸಾಲಕ್ಕೆ ಷೇರುಗಳ ಜೋಡಣೆ ಪ್ರಮಾಣವನ್ನು ನಿರ್ಧರಿಸುವ ಸ್ವಾತಂತ್ರ್ಯ ಆ ಬ್ಯಾಂಕಿಗೆ ಇರುತ್ತದೆ. ನಿಮ್ಮ ಬ್ಯಾಂಕಿನ ಸಿ.ಆರ್.ಎ.ಆರ್ ನಿಮ್ಮ ಬ್ಯಾಂಕಿಗೆ ಅನ್ವಯವಾಗುವ ಪ್ರಮಾಣಕ್ಕಿಂತ ಅಧಿಕವಾಗಿರುವುದರಿಂದ ಪಡೆಯುವ ಸಾಲಕ್ಕೆ ಷೇರುಗಳ ಜೋಡಣೆ ಪ್ರಮಾಣವನ್ನು ನಿರ್ಧರಿಸುವ ಅಧಿಕಾರ ಬ್ಯಾಂಕಿನ ಆಡಳಿತ ಮಂಡಳಿಗೆ ಇದೆ. ಮುಂಬರುವ ವಾರ್ಷಿಕ ಮಹಾಸಭೆಯಲ್ಲಿ ಬ್ಯಾಂಕಿನ ಉಪವಿಧಿಗೆ ಸೂಕ್ತ ತಿದ್ದುಪಡಿ ಮಾಡಬಹುದು. ಬ್ಯಾಂಕಿನ ಉಪವಿಧಿ ಮತ್ತು ರಿಜರ್ವ್ ಬ್ಯಾಂಕಿನ ಮಾರ್ಗಸೂಚಿಗಳಲ್ಲಿ ವಿರೋಧಾಭಾಸವಿದ್ದಲ್ಲಿ, ರಿಜರ್ವ್ ಬ್ಯಾಂಕಿನ ಮಾರ್ಗಸೂಚಿಯನ್ನು ಪಾಲಿಸಬೇಕಾಗುತ್ತದೆ. ಪಡೆಯುವ ಸಾಲಕ್ಕೆ ಷೇರುಗಳ ಜೋಡನೆ ಬಗ್ಗೆ ಒಂದು ನೀತಿಗೆ ಆಡಳಿತ ಮಂಡಳಿ ಒಪ್ಪಿಗೆ ಪಡೆದು ಭದ್ರತೆಯ ಮೇಲೆ ಸಾಲ ಪಡೆಯುವವರು ಪಡೆಯಬೇಕಾದ ಷೇರುಗಳ ಪ್ರಮಾಣವನ್ನು ಕಾರ್ಯಗತಗೊಳಿಸಿ ನಿಮ್ಮ ಸಾಲದ ನೀತಿ (Loan Policy) ಯಲ್ಲಿಯೂ ಸೂಕ್ತ ಬದಲಾವಣೆ ಮಾಡಿ.



## ಆನ್‌ಲೈನ್ ನ್ಯೂಸ್

ಈ ಪುಟದಲ್ಲಿನ ಸುದ್ದಿಗಳನ್ನು ಓದಿದ್ದೀರಾ...?
**ಕುತೂಹಲಕಾರಿಯಾದ ಸುದ್ದಿಗಳು** ನಿಮ್ಮ ಕಣ್ಣು ತಪ್ಪಿದ್ದರೆ, ಇಲ್ಲಿವೆ ಓದಿ.

- ದುಬೈನಲ್ಲಿರುವ ಕನ್ನಡ ಮಿತ್ರರ ಸಂಘ ಅಲ್ಲಿಗೆ ವಲಸೆ ಬಂದಿರುವ ಕನ್ನಡಿಗರ ಮಕ್ಕಳಿಗೆ ಕನ್ನಡ ಕಲಿಸುವ ಪ್ರಯತ್ನ ಮಾಡುತ್ತಿದೆ. ಇದಕ್ಕಾಗಿ ಅಗತ್ಯವಿರುವ ಪಠ್ಯಕ್ರಮವನ್ನೂ ಕೂಡ ವಿನ್ಯಾಸಗೊಳಿಸಿದೆ. ಮೂರು ಹಂತದಲ್ಲಿ ಪಠ್ಯಕ್ರಮವಿದ್ದು, ಮೊದಲನೇ ಹಂತದಲ್ಲಿ ನಾವು ವಿದ್ಯಾರ್ಥಿಗಳಿಗೆ ವರ್ಣಮಾಲೆಗಳು, ಸಂಖ್ಯೆಗಳು ಮತ್ತು ಕವಿತೆಗಳನ್ನು ಕಲಿಸಲಾಗುತ್ತದೆ. ಎರಡರ ಹಂತದಲ್ಲಿ ಕನ್ನಡ ಪದಗಳು ಮತ್ತು ವಾಕ್ಯಗಳ ರಚನೆಯನ್ನು ಕಲಿಸಲಾಗುತ್ತದೆ. ಮೂರನೇ ಹಂತದಲ್ಲಿ ಕನ್ನಡ ವ್ಯಾಕರಣ, ಪ್ರಬಂಧ ಮತ್ತು ಪತ್ರ ಬರೆಯುವಿಕೆಯನ್ನು ಕಲಿಸಲಾಗುತ್ತದೆ.
- ಮಧ್ಯಪ್ರದೇಶದ ಖಾಂಡ್ವಾ ಜಿಲ್ಲಾ ಪಂಚಾಯತ್‌ನಲ್ಲಿ ಸಿಇಒ ಆಗಿರುವ ತುಮಕೂರು ಜಿಲ್ಲೆಯ ತಿಪಟೂರಿನವರಾದ ಐಎಎಸ್ ಅಧಿಕಾರಿ ಡಾ. ನಾಗಾರ್ಜುನ್ ಬಿ. ಗೌಡ ಅವರ ನೇತೃತ್ವದಲ್ಲಿ ಮಳೆ ನೀರು ಕೊಯ್ಲು ಯೋಜನೆಯ ಅನುಷ್ಠಾನದಲ್ಲಿ ಅತ್ಯುತ್ತಮ ಸಾಧನೆ ತೋರಿಸಿದೆ. ಅದಕ್ಕಾಗಿ ರೂ. 2 ಕೋಟಿ ನಗದು ಪ್ರಶಸ್ತಿಯನ್ನು ಗಳಿಸಿದ್ದು, ರಾಷ್ಟ್ರಪತಿ ದ್ರೌಪದಿ ಮುರ್ಮು ಅವರಿಂದ ಸನ್ಮಾನಗೊಂಡಿದ್ದಾರೆ.
- ಮಹಾರಾಷ್ಟ್ರದ ಪಾಲ್ಘರ್ ಜಿಲ್ಲೆಯಲ್ಲಿ 11 ವರ್ಷದ ಮಾಯಾಂಕ್ ಕುವಾರ ಎಂಬ ಶಾಲಾ ಬಾಲಕನೊಬ್ಬನ ಮೇಲೆ ಚಿರತೆಯೊಂದು ದಾಳಿ ನಡೆಸಿದಾಗ, ಅವನೊಂದಿಗೆ ಇದ್ದ ಸ್ನೇಹಿತ ಧೈರ್ಯದಿಂದ ಕೂಗು ಹಾಕಿ, ಚಿರತೆ ಮೇಲೆ ಕಲ್ಲುಗಳನ್ನು ಎಸೆದು ಪ್ರತಿದಾಳಿ ನಡೆಸಿ, ಚಿರತೆಯನ್ನು ಹಿಮ್ಮೆಟ್ಟಿಸಿ ಸ್ನೇಹಿತನನ್ನು ಕಾಪಾಡಿದ್ದಾನೆ.
- ಕೇರಳದ ಆಳಪ್ಪುಳ ನಿವಾಸಿ ಅವನಿಯೊಂದಿಗೆ ಥುಂಬೋಳಿ ನಿವಾಸಿ ಶರೋನ್ ವಿವಾಹ ನಿಗದಿಯಾಗಿತ್ತು. ಮದುವೆ ಮುನ್ನ ಮೇಕಪ್ ಮಾಡಿಸಿಕೊಳ್ಳಲು ತೆರಳುತ್ತಿದ್ದ ವಧು, ನಿಯಂತ್ರಣ ತಪ್ಪಿದ ಕಾರು ಮರಕ್ಕೆ ಡಿಕ್ಕಿ ಹೊಡೆದ ಪರಿಣಾಮ, ವಧುವಿನ ಬೆನ್ನುಮೂಳೆಗೆ ತೀವ್ರ ಗಾಯವಾಗಿ ಆಸ್ಪತ್ರೆಗೆ ದಾಖಲಾಗಿದ್ದಾಳೆ. ನಂತರ ಆಸ್ಪತ್ರೆಗೆ ತೆರಳಿದ ವರ ಐಸಿಯುನಲ್ಲೇ ವಧುವಿಗೆ ತಾಳಿ ಕಟ್ಟಿದ್ದಾನೆ.
- ಬೆಂಗಳೂರು ಅಪರಿಚಿತ ಸಂಖ್ಯೆಗಳಿಂದ ಬರುವ ಕರೆ ಮಾಡಿದವರ ಹೆಸರನ್ನು ಕಂಡುಹಿಡಿಯಲು ನೀವು ಇನ್ನು ಮುಂದೆ ಟ್ರೂಕಾಲರ್ ಬಳಸಬೇಕಾಗಿಲ್ಲ. ಕೇಂದ್ರ ಸರ್ಕಾರ CNAP ಎಂಬ ಹೊಸ ಕಾಲರ್ ಐಡಿ ವ್ಯವಸ್ಥೆಯನ್ನು ಪರಿಚಯಿಸುತ್ತಿದ್ದು, ಅದು ಕರೆ ಮಾಡಿದವರ ಹೆಸರನ್ನು ತೋರಿಸುತ್ತದೆ.

## ಓದುಗರ ಅನಿಸಿಕೆ...




**ಮಾರ್ಗದರ್ಶನ :** ಆರ್ಥಿಕ ಸ್ವಾತಂತ್ರ್ಯಕ್ಕೆ ಸಹಕಾರವೇ ಹೆಬ್ಬಾಗಿಲು ಎನ್ನುವುದು ಮಹಾತ್ಮ ಗಾಂಧೀ ಅವರ ಆಶಯವಾಗಿದ್ದರೆ, ಗ್ರಾಮಕ್ಕೊಂದು ಶಾಲೆ, ಪಂಚಾಯಿತಿ ಹಾಗೂ ಸಹಕಾರ ಸಂಘವಿದ್ದಲ್ಲಿ ಗ್ರಾಮಾಭಿವೃದ್ಧಿ ಸಾಧ್ಯ ಎನ್ನುವುದು ಪಂಡಿತ್ ನೆಹರೂ ರವರ ಕನಸಾಗಿತ್ತು, ಈ ಇಬ್ಬರು ಮಹನೀಯರ ಆಶಯವನ್ನು ಸಾಕಾರಗೊಳಿಸುವ ಹಾದಿಯಲ್ಲಿ ಶ್ರೀ ಎಚ್.ಕೆ. ಪಾಟೀಲರು ನಡೆಯುತ್ತಾ, ನಮಗೆಲ್ಲಾ ಮಾರ್ಗದರ್ಶನ ಮಾಡುತ್ತಿದ್ದಾರೆ.

**▸▸ ಮಂಜುನಾಥ ಆರ್.ಎಂ. ಅರಕಲಗೂಡು**

**ನಮೋ ಎನ್ನೋಣ :** ದೇಶದ ಮೊದಲ ಪ್ರಧಾನಿಯಾಗಿ ನೆಹರೂ ಅವರು ಕೃಷಿ, ನೀರಾವರಿ, ಕೈಗಾರಿಕೆಯೊಂದಿಗೆ ಸಹಕಾರ ವಲಯಕ್ಕೂ ಪ್ರೋತ್ಸಾಹ ನೀಡಿದರು. ದೇಶವನ್ನು ವ್ಯವಸ್ಥಿತವಾಗಿ ಕಟ್ಟಲು ಪಂಚ ವಾರ್ಷಿಕ ಯೋಜನೆಗಳನ್ನು ರೂಪಿಸಿದರು. ಇಂದು ದೇಶ ಎಲ್ಲ ಕ್ಷೇತ್ರಗಳಲ್ಲಿ ಸ್ವಾವಲಂಬಿಯಾಗಿದ್ದರೆ, ಅದಕ್ಕೆ ನೆಹರೂ ಅವರೇ ಕಾರಣ. ಸುದೀರ್ಘ ಹದಿನೇಳು ವರ್ಷಗಳ ಕಾಲ ಪ್ರಧಾನಿಯಾಗಿ ಸೇವೆ ಸಲ್ಲಿಸಿದ ಮಹಾನ್ ಚೇತನಕ್ಕೆ ನಮೋ ಎನ್ನೋಣ.

**▸▸ ಆನಂದಮೂರ್ತಿ ಜಿ.ವಿ., ಹಾಸನ**

ಸಂಪಾದಕರು :
**ಪುಂಡಲೀಕ ಎನ್. ಕೇರೂರೆ,**
ಮುಖ್ಯಕಾರ್ಯನಿರ್ವಹಣಾಧಿಕಾರಿ,
ಕರ್ನಾಟಕ ರಾಜ್ಯ ಪಟ್ಟಣ ಸಹಕಾರ ಬ್ಯಾಂಕುಗಳ
ಮಹಾಮಂಡಳ ನಿ., ಬೆಂಗಳೂರು.

**ಇವರಿಗೆ,**

Edited, Published and printed by Pundalik N. Kerure, C.E.O. on behalf of the
Karnataka State Co-operative Urban Banks Federation Ltd., Bangalore - 560027.
Published at : # 132, K.H. Road, Bangalore - 560027.
Printed at : Navarathna Printers, #35, 3rd Cross, Sudhamanagar, Bangalore - 560027.